**ಸಾಕ್ಷಿಯನ್ನು ದಿಃ *07/08/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಮುಂದುವರೆದ ಪಾಟೀ ಸವಾಲು : ಶ್ರೀ ಎಎಂಎಂ ವಕೀಲರಿಂದ ಪ್ರತಿವಾದಿ ಪರವಾಗಿ.***

ನಾನು ಮಲಪ್ರಭಾ ಗ್ರಾಮೀಣ ಬ್ಯಾಂಕನಲ್ಲಿ ಖಾತೆ ಹೊಂದದೆಯಿದ್ದರೂ ಖಾತೆ ಹೊಂದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿ.ಪಿ.16 ರಿಂದ 18 ಕೆವಿಜಿ ಬ್ಯಾಂಕಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ನಿ.ಪಿ.16ರ ಪ್ರಕಾರ ಪ್ರತಿವಾದಿ ಖಾತೆಯಿಂದ ನಮ್ಮ ಖಾತೆಗೆ ಎಷ್ಟು ಹಣ ಜಮೆ ಆಗಿದೆ ಎಂದು ಹೇಳಲು ಆಗುವುದಿಲ್ಲ. ನಿ.ಪಿ.17ರ ಪ್ರಕಾರ ನನ್ನ ಸಹೋದರ ವಿಠಪ್ಪ ಇವರ ಖಾತೆಗೆ ಪ್ರತಿವಾದಿ ಖಾತೆಯಿಂದ ಎಷ್ಟು ಹಣ ಜಮೆ ಆಗಿದೆ ಎಂದು ಹೇಳಲು ಆಗುವುದಿಲ್ಲ. ನಿ.ಪಿ.18ರ ಪ್ರಕಾರ ನನ್ನ ಸಹೋದರ ಶಿವಪ್ಪ ಇವರ ಖಾತೆಗೆ ಪ್ರತಿವಾದಿ ಖಾತೆಯಿಂದ ಎಷ್ಟು ಹಣ ಜಮೆ ಆಗಿದೆ ಎಂದು ಹೇಳಲು ಆಗುವುದಿಲ್ಲ. ನಿ.ಪಿ.16 ರಿಂದ 18ರ ಮಾಹಿತಿಗಳನ್ನು ನಾನು ಬೇರೆ ವ್ಯಕ್ತಿಗಳಿಂದ ಓದಿಸಿ ತಿಳಿದುಕೊಳ್ಳಲು ಪ್ರಯತ್ನ ಮಾಡಲಿಲ್ಲ. ಪ್ರತಿವಾದಿಯಿಂದ ಬ್ಯಾಂಕ ಖಾತೆ ವರ್ಗಾವಣೆ ಹಾಗೂ ಡಿಡಿ ಮೂಲಕ ನಮಗೆ ಕೊಡಬೇಕಾದ

ಸಂಪೂರ್ಣ ಹಣವನ್ನು ಪ್ರತಿವಾದಿ ಪಾವತಿ ಮಾಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ನಿ.ಪಿ.4 ರಂತೆ ಒಟ್ಟು ಮೊಕ್ತಿಯಾರ ನಾಮೆ ಹಾಗೂ ನಿ.ಪಿ.15 ರಂತೆ ಖರೀದಿ ಪತ್ರವನ್ನು ಉಪನೊಂದಣಾಧಿಕಾರಿಗಳು ಓದಿ ಹೇಳಿದ್ದು, ಅವುಗಳ ಮಜಕೂರು ತಿಳಿದ ನಂತರ ನಾವುಗಳು ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.15 ರ ಮಜಕೂರುಗಳ ಪ್ರಕಾರ ಪ್ರತಿವಾದಿ ನಮಗೆ ಸಂಪೂರ್ಣ ಹಣ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ನಮಗೆ ಬರಬೇಕಾದ ಬಾಕಿ ಹಣ ಯಾವುದು ಇಲ್ಲ ಎಂದರೆ ಸರಿಯಲ್ಲ. ನಿ.ಪಿ.15 ನ್ನು ಹೊರತುಪಡಿಸಿ ನಮ್ಮ ಹಾಗೂ ಪ್ರತಿವಾದಿ ನಡುವೆ ಬೇರೆ ದಾಖಲೆಗಳು ಬರೆದಿಲ್ಲ ಅಥವಾ ಅಸ್ತಿತ್ವದಲ್ಲಿಲ್ಲ ಎಂದರೆ ಸರಿ. ಪ್ರತಿವಾದಿಯಿಂದ ಹೆಚ್ಚಿನ ಹಣ ಪಡೆಯಲು ಈ ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.